೪) ಕೃಷ್ಣರಾಜನಗರ ತಾಲ್ಲೂಕಿನಲ್ಲಿ ಮುಂಗಾರು ಮಳೆಯಿಂದಾಗಿ ರೈತರಬೆಳೆಗಳು ಹಾನಿಯಾಗಿರುವುದು

ಶ್ರೀ ಎಸ್. ನಂಜಪ್ಪ.—ಕೃಷ್ಣರಾಜನಗರ ತಾಲ್ಲೂಕಿನಲ್ಲಿ ಮುಂಗಾರು ಮಳೆಯಿಂದಾಗಿ ರೈತರ ಬೆಳೆಗಳಿಗೆ ಹಾನಿಯಾಗುತ್ತಿರುವ ಬಗ್ಗೆ ಮಾನ್ಯ ಕೃಷಿ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ.—ಕೃಷ್ಣರಾಜನಗರ ತಾಲ್ಲೂಕಿನಲ್ಲಿ ಕಿರಾಣಿ ಬೆಳೆಗಳನ್ನು ಮಿಡತೆಗಳು ಹಾಳಿ ಮಾಡಿರುವ ಬಗ್ಗೆ ವರದಿಯಾಗಿಲ್ಲ ಆದರೆ ಜೋಳ ರಾಗಿ ಅಲಸಂದೆ ಸೂರ್ಯಕಾಂತಿ ಮುಂತಾದ ಬೆಳೆಗಳಿಗೆ ಕಂಪುತಲೆ ಕಂಬಳೀ ಹುಳುಗಳ ಭಾದೆ ಕಂಡು ಬಂದಿರುವುದು ವರದಿಯಾಗಿದೆ.

ಕೃಷ್ಣರಾಜನಗರ ತಾಲೂಕಿನ ಹೊಸಕೋಟೆ ಚಿಬುಕಳ್ಳಿ, ಬೆಣಗನಹಳ್ಳಿ, ನಿಜಗನಹಳ್ಳಿ ಕೊಪ್ಪಲು ಚಿಕ್ಕಕೊಪ್ಪಲು ಮತ್ತು ಐಚನಹಳ್ಳಿ ಗ್ರಾಮಗಳಲ್ಲಿ ಸುಮಾರು ೮೭೨ ಹೆಕ್ಟೇರು ಪ್ರದೇಶದಲ್ಲಿ ಈ ಕೀಟದ ಹಾವಳಿ ಕಂಡು ಬಂದಿದೆ.

ರಾಜ್ಯ ಮಟ್ಟದ ಮೌಲ್ಯಮಾಪನಾ ತಂಡವು ಈ ಪ್ರದೇಶಗಳಿಗೆ ದಿನಾಂಕ ೧೨-೫-೮೮ ರಂದು ಭೇಟಿ ನೀಡಿ ಬೆಳೆಗಳನ್ನು ಸಮೀಕ್ಷಿಸಿದೆ. ಬೆಳೆಯು ೧೨ ರಿಂದ ೨೫ ದಿನಗಳ ವಯಸ್ಸಿನಲ್ಲಿದ್ದು ಈ ಬೆಳೆಗಳಿಗೆ ಕೀಟದ ಹಾವಳಿ ಉಂಟಾಗಿರುವುದನ್ನು ವರದಿ ಮಾಡಿದೆ. ಕೀಟದ ಮೊಟ್ಟೆ ಮತ್ತು ಚಿಟ್ಟೆಗಳು ಬೆಳೆಗಳ ಮುತ್ತು ಬದುಗಳಲ್ಲಿನ ಪೊದೆಗಳ ಮೇಲೆ ಕಂಡು ಬಂದಿದೆ. ಅಲ್ಲಲ್ಲಿ ಕೆಲವು ಪೈರುಗಳ ಮೇಲೆ ೧ ರಿಂದ ೩ ರವರೆಗೆ ಕಂಬಳಿ ಹುಳುಗಳು ಇರುವುದು ಕಂಡು ಬಂದಿದ್ದು ಹೆಚ್ಚಿನ ಹಾನಿ ಉಂಟಾಗಿರುವುದಿಲ್ಲ. ಹೆಚ್ಚಿನ ಹಾನಿ ಉಂಟಾಗುವುದಕ್ಕೆ ಮೊದಲೇ ಮುನ್ನೆಚ್ಚರಿಕೆ ವಹಿಸಿ ರೈತರಿಗೆ ಕೀಟ ನಿಯಂತ್ರಣದ ಬಗ್ಗೆ ಸೂಕ್ತ ಮಾಹಿತಿಯ ಸಭೆಗಳನ್ನು ನಡೆಸುವುದು ಕರಪತ್ರಿಕೆಗಳನ್ನು ಹಂಚುವುದು ಆಕಾಶವಾಣಿ ಮುಂತಾದವುಗಳ ಮೂಲಕ ತಿಳುವಳಿಕೆ ನೀಡಲಾಗಿದೆ. ಸೂಕ್ತ ಕೀಟ ನಾಶಕಗಳನ್ನು ಕೀಟ ಕಂಡು ಬಂದಿರುವ ಪ್ರದೇಶಗಳಲ್ಲಿ ಸಾಕಷ್ಟು ದಾಸ್ತಾನು ಮಾಡಲಾಗಿದೆ. ಕೇಂದ್ರ ಪುರಸ್ಕೃತ ಯೋಜನೆಯಡಿಯಲ್ಲಿ ಕೀಟನಾಶಕಗಳನ್ನು ಶೇ ೫೦ರ ರಿಯಾಯಿತಿಯಲ್ಲಿ ಸರಬರಾಜು ಮಾಡಿ ಕೆಂಪು ತಲೆ ಕಂಬಳಿ ಹುಳುವನ್ನು ನಿಯಂತ್ರಿಸಲು ರೂ. ೨೫,೦೦೦-೦೦ನ್ನು ಈ ತಾಲ್ಲೂಕಿಗೆ ನೀಡಲಾಗಿದೆ. ನಿಯಂತ್ರಣಾ ಕ್ರಮಗಳು ಮುಂದುವರಯುತ್ತಿವೆ.

ಶ್ರೀ ಎಸ್. ನಂಜಪ್ಪ.—ಅಧ್ಯಕ್ಷರೇ, ಮಿಡತೆ ಹಾವಳಿ ಬಗ್ಗೆ ವರದಿಯಾಗಿಲ್ಲವೆಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ ಕೆಂಪುತಲೆ ಕಂಬಳಿ ಹುಳುಗಳ ಬಾದೆ ಕಳೆದ ೫ ವರ್ಷಗಳಿಂದಲೂ ಇದೆ. ಆದರ ಬಗ್ಗೆ ಕ್ರಮ ತೆಗೆದುಕೊಂಡಿದ್ದಾರೆ ಇದರ ಜೊತೆಗೆ ಮಿಡತೆ ಹುಳುಗಳು ಅಗಾಧವಾಗಿ ಬಂದು ರಾಗಿ ಇತರೆ ಕಿರಾಣಿ ಬೆಳೆಗಳು ಸಂಪೂರ್ಣವಾಗಿ ನಾಶವಾಗುತ್ತಿವೆ ಆದ್ದರಿಂದ ಇದರ ಬಗ್ಗೆ ವರದಿಯನ್ನು ತರಿಸಿಕೊಂಡು ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ವಿ. ದೆ ಶಪಾಂಡೆ —ಈ ಬಗ್ಗೆ ರಾಜ್ಯಮಟ್ಟದ ಮೌಲ್ಯಮಾಪನಾ ತಂಡವು ಈ ಪ್ರದೇಶಗಳಿಗೆ ಭೇಟಿ ನೀಡಿ ತಮ್ಮ ವರದಿಯನ್ನು ಕೊಟ್ಟಿದ್ದಾರೆ ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡು ಹಣ ಬಿಡುಗಡೆ ಮಾಡಿದ್ದೇವೆ. ಇದರ ಬಗ್ಗೆ ಪುನಃ ಪರಿಶೀಲನೆ ಮಾಡುತ್ತೇನೆ.

ನಿಯಮ ೩೩ಳಿರ ಮೇರೆಗೆ

ಶ್ರೀ ಪಿ. ಜಿ. ಆರ್. ಸಿಂಧ್ಯ.—ಅಧ್ಯಕ್ಷರೆ ಮಾನ್ಯ ಶಿವಣ್ಣ ಅವರ ಸೂಚನೆಗೆ ನಾನು ಉತ್ತರ ಕೊಡುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಗೈರು ಹಾಜರಾಗಿದ್ದಾರೆ ಆದ್ದರಿಂದ ದಯವಾಡಿ ಮಾನ್ಯ ಸದಸ್ಯರಿಗೆ ತಾವು ಉತ್ತರವನ್ನು ಕಳುಹಿಸಿಕೊಡಿ.